# ಎಲ್ಲರೂ ದೀಪಧಾರಿಗಳಾಗಬೇಕಾದ ಸಮಯ

> ಹಸಿವು–ಬಡತನವೆಂಬ ಕತ್ತಲು ತೊಡೆಯುವ ಸಂಕಲ್ಪದಲ್ಲಿ ರೂಪುಗೊಂಡ ಎಲ್ಲ ಯೋಜನೆಗಳು ಅರ್ಹರನ್ನು ತಲುಪುವಲ್ಲಿ ಯಶಸ್ವಿಯಾಗಿಲ್ಲ. ಎಷ್ಟೆಲ್ಲ ಅಭಿವೃದ್ಧಿ ಕಾರ್ಯಕ್ರಮಗಳ ನಂತರವೂ ಹಸಿದ ಹೊಟ್ಟೆಗಳು ದೇಶದಲ್ಲಿವೆ. ಬೆಳಕು ಬೀರಲು ಹೊರಟವರು ತಮ್ಮ ಮನೆಗಳನ್ನಷ್ಟೇ ಬೆಳಗಿಕೊಂಡಿದ್ದು ಹಸಿವೆ ಎನ್ನುವ ಕತ್ತಲು ಉಳಿಯಲು ಕಾರಣವಾಗಿದೆ.



ಈಶ್ವರ

‘ಹಣತೆ ಹಚ್ಚುತ್ತೇನೆ ನಾನೂ / ಈ ಕತ್ತಲನು ಗೆದ್ದು ನಿಲ್ಲುತ್ತೇನೆಂಬ ಜಿದ್ದಿನಿಂದಲ್ಲ; / ಲೆಕ್ಕವೇ ಇರದ ದೀಪಾವಳಿಯ ಹಡಗುಗಳೆ / ಇದರಲ್ಲಿ ಮುಳುಗಿ ಕರಗಿರುವಾಗ / ನಾನು ಹಚ್ಚುವ ಹಣತೆ ಶಾಶ್ವತವೆಂಬ ಭ್ರಾಂತಿ ನನಗಿಲ್ಲ’ ಎನ್ನುವ ಜಿ.ಎಸ್. ಶಿವರುದ್ರಪ್ಪನವರ ಕವಿತೆಯ ಸಾಲುಗಳು ಬೆಳಕಿಗೆ ಸಂಬಂಧಿಸಿದ ಚರ್ಚೆಗಳ ಸಂದರ್ಭದಲ್ಲಿ ಬಳಕೆಯಾಗುತ್ತಿರುತ್ತವೆ. ಮನುಷ್ಯ ದೀಪಧಾರಿಯಾಗಬೇಕು, ಬದುಕೇ ದೀಪವಾಗಬೇಕು ಎನ್ನುವುದು ಈ ಕವಿತೆಯ ಆಶಯ. ಆದರೆ, ಬೆಳಕಿನ ಕುರಿತು ನಮ್ಮ ಅಪೇಕ್ಷೆಗಳು ಹೆಚ್ಚಿನ ಸಂದರ್ಭದಲ್ಲಿ ಮಾತಿನ ರೂಪ ತಾಳುವುದು ದೀಪಾವಳಿಯ ಆಸುಪಾಸಿನಲ್ಲಷ್ಟೇ. ಕತ್ತಲನ್ನು ನೀಗಿಕೊಂಡು ಬೆಳಕನ್ನು ಪಡೆಯುವ ಹಂಬಲವೇ ದೀಪಾವಳಿಯ ರೂಪ ತಾಳಿದೆ. ಈ ಕತ್ತಲೆ ದೃಷ್ಟಿಗೆ ಸಂಬಂಧಿಸಿದ್ದಷ್ಟೇ ಅಲ್ಲ, ಮನಸ್ಸಿನ ತಿಮಿರಕ್ಕೂ ಸಂಬಂಧಿಸಿದ್ದು. ಹಾಗೆ ನೋಡಿದರೆ, ಭೌತಿಕ ಕತ್ತಲೆಗಿಂತ ಮನಸ್ಸಿನ ಕತ್ತಲು ಪರಿಹರಿಸಿಕೊಳ್ಳುವುದು ಈ ಹೊತ್ತಿನ ಅಗತ್ಯ.

ದೀಪದಿಂದ ದೀಪವನ್ನು ಹಚ್ಚೋಣ, ಮನಸ್ಸಿನಿಂದ ಮನಸ್ಸನ್ನು ಬೆಳಗೋಣ ಎಂದು ಶತಮಾನಗಳಿಂದ ಹೇಳುತ್ತಲೇ ಬಂದಿದ್ದೇವೆ. ಹಾಗಾದರೆ ನಮ್ಮ ಬದುಕನ್ನು, ಸಮಾಜ–ದೇಶವನ್ನು ಅರಿವು–ನೆಮ್ಮದಿಯ ರೂಪದ ಬೆಳಕು ತುಂಬಿಕೊಂಡಿದೆಯೇ? ಇಲ್ಲ ಎನ್ನುತ್ತಿದೆ, ‘ಕನ್ಸರ್ನ್ ವರ್ಲ್ಡ್‌ವೈಡ್’ ಮತ್ತು ‘ವೆಲ್ತ್ ಹಂಗರ್ ಹಿಲ್ಫ್’ ಎನ್ನುವ ಸಂಸ್ಥೆಗಳು ಕಳೆದ ವಾರ ಪ್ರಕಟಿಸಿರುವ ‘ಜಾಗತಿಕ ಹಸಿವು ಸೂಚ್ಯಂಕ’ದ ವರದಿ. ಅಧ್ಯಯನ ನಡೆದ 117 ದೇಶಗಳ ಪೈಕಿ ಭಾರತ ಹಸಿವಿನ ಸೂಚ್ಯಂಕದಲ್ಲಿ 112ನೇ ಸ್ಥಾನದಲ್ಲಿದೆ. ದಕ್ಷಿಣ ಏಷ್ಯಾ ಮತ್ತು ‘ಬ್ರಿಕ್ಸ್’ ದೇಶಗಳಲ್ಲಿ ಹಸಿವಿನಿಂದ ಬಳಲುತ್ತಿರುವ ಹೆಚ್ಚು ಜನರು ಭಾರತದಲ್ಲಿದ್ದಾರೆ ಎನ್ನುತ್ತಿದೆ ಸಮೀಕ್ಷೆ. ಅಪೌಷ್ಟಿಕತೆ, ಶಿಶುಮರಣ, ಮಕ್ಕಳ ಕಡಿಮೆ ತೂಕ – ಇವೆಲ್ಲವೂ ಹಸಿವೆಯ ಸಮಸ್ಯೆಯೊಂದಿಗೆ ತಳಕು ಹಾಕಿಕೊಂಡಿವೆ. 6ರಿಂದ 23 ತಿಂಗಳವರೆಗಿನ ಶೇ. 9.6 ಮಕ್ಕಳಿಗಷ್ಟೇ ದೇಶದಲ್ಲಿ ಕನಿಷ್ಠ ಆಹಾರ ದೊರೆಯುತ್ತಿದೆ. ಶಿಶುಮರಣ ಪ್ರಮಾಣ ಶೇ. 3.9ರಷ್ಟಿದ್ದರೆ, ಬೆಳವಣಿಗೆ ಕುಂಠಿತವಾದ ಮಕ್ಕಳ ಸಂಖ್ಯೆ ಶೇ. 37.8ರಷ್ಟಿದೆ. ಹಸಿವನ್ನು ಹತ್ತಿಕ್ಕುವ ಪ್ರಯತ್ನದಲ್ಲಿ ನೆರೆಯ ದೇಶಗಳಾದ ಪಾಕಿಸ್ತಾನ (94), ಬಾಂಗ್ಲಾದೇಶ (88), ನೇಪಾಳ (73) ಹಾಗೂ ಶ್ರೀಲಂಕಾ (66) ನಮಗಿಂತಲೂ ಮುಂದಿವೆ. ಜನಸಂಖ್ಯೆಯಲ್ಲಿ ವಿಶ್ವಕ್ಕೇ ದೊಡ್ಡಣ್ಣನಾದ ಚೀನಾ (25) ತನ್ನವರೆಲ್ಲರಿಗೂ ಆಹಾರ ಒದಗಿಸುವ ನಿಟ್ಟಿನಲ್ಲಿ ಗಣನೀಯ ಪ್ರಗತಿ ಸಾಧಿಸಿದೆ.

ಹಸಿವಿನ ಸೂಚ್ಯಂಕ ಮುಂದಿಟ್ಟಿರುವ ‘ವರ್ತಮಾನದ ಭಾರತ’ವನ್ನು ಗಮನಿಸಿದರೆ, ನಾವು ಈವರೆಗೆ ಉರಿಸಿರುವ ಬೆಳಕಿನ ಮತಾಪುಗಳೆಲ್ಲ ಎಷ್ಟು ಅರ್ಥಹೀನ ಎನ್ನುವುದು ಮನದಟ್ಟಾಗುತ್ತದೆ. ‘ಗರೀಬಿ ಹಟಾವೊ’ ಎಂದೆವು; ಬಡತನದ ತೀವ್ರತೆ ಕಡಿಮೆಯಾಗಲಿಲ್ಲ. ದೇಶದೆಲ್ಲೆಡೆ ಪಡಿತರ ವ್ಯವಸ್ಥೆ ಜಾರಿಯಲ್ಲಿದೆ, ಬಡವರಿಗೆ ಉಚಿತವಾಗಿ ಆಹಾರಧಾನ್ಯ ನೀಡುವ ವ್ಯವಸ್ಥೆಯೂ ಕೆಲವೆಡೆ ಇದೆ. ಕರ್ನಾಟಕದಲ್ಲಿ ‘ಅನ್ನಭಾಗ್ಯ’, ‘ಇಂದಿರಾ ಕ್ಯಾಂಟೀನ್’ಗಳು ಸಕ್ರಿಯವಾಗಿವೆ. ಇಷ್ಟೆಲ್ಲ ಯೋಜನೆಗಳ ನಂತರವೂ ಹಸಿದ ಹೊಟ್ಟೆಗಳು ದೇಶದಲ್ಲಿವೆ! ಸದ್ಯಕ್ಕೆ ದೇಶದಲ್ಲಿ ಸುದ್ದಿಯಲ್ಲಿರುವುದು ‘ಸ್ವಚ್ಛಭಾರತ’ದ ಘೋಷಣೆ. ಈ ಆಂದೋಲನ ಕೂಡ ನಿರೀಕ್ಷಿತ ಯಶಸ್ಸು ಕಂಡಿಲ್ಲ ಎನ್ನುತ್ತಿದೆ ಹಸಿವಿನ ಸೂಚ್ಯಂಕದ ವರದಿ. ಇದರರ್ಥ ಇಷ್ಟೇ, ಹಸಿವು–ಬಡತನವೆಂಬ ಕತ್ತಲು ತೊಡೆಯುವ ಸಂಕಲ್ಪದಲ್ಲಿ ರೂಪುಗೊಂಡ ಎಲ್ಲ ಯೋಜನೆಗಳು ಅರ್ಹರನ್ನು ತಲುಪುವಲ್ಲಿ ಯಶಸ್ವಿಯಾಗಿಲ್ಲ. ಬೆಳಕು ಬೀರಲು ಹೊರಟವರು ತಮ್ಮ ಮನೆಗಳನ್ನಷ್ಟೇ ಬೆಳಗಿಕೊಂಡಿದ್ದು ಹಸಿವೆ ಎನ್ನುವ ಕತ್ತಲು ಉಳಿಯಲು ಕಾರಣವಾಗಿದೆ.

ಆಹಾರ ಮನುಷ್ಯನ ಮೂಲಭೂತ ಅವಶ್ಯಕತೆಗಳಲ್ಲೊಂದು. ಈ ಪ್ರಾಥಮಿಕ ಅಗತ್ಯದ ಪೂರೈಕೆಯೇ ಅಸಮರ್ಪಕವಾಗಿರುವುದು ನಮ್ಮ ಅಭಿವೃದ್ಧಿಯೋಜನೆಯ ಪುನರ್ ವಿಮರ್ಶೆಗೆ ಒತ್ತಾಯಿಸುವಂತಿದೆ. ಒಂದೆಡೆ, ವಿಶ್ವದ ಪ್ರಬಲ ಆರ್ಥಿಕ ಶಕ್ತಿಗಳಲ್ಲೊಂದಾಗಿ ಭಾರತವನ್ನು ಗುರ್ತಿಸುವ ಪ್ರಯತ್ನಗಳು; ಇನ್ನೊಂದೆಡೆ ಹಸಿದ ಜನರ ದೇಶ – ಈ ಸಂದಿಗ್ಧವನ್ನು ದಾಟಲಿಕ್ಕೆ ಬೃಹತ್ ಆಂದೋಲನವೇ ನಡೆಯಬೇಕಾಗಿದೆ. ‘ಹಸಿವು ಮುಕ್ತ ಭಾರತ’ ಎನ್ನುವುದು ಸರ್ಕಾರದ ಕೆಲಸವಷ್ಟೇ ಆಗದೆ, ಎಲ್ಲ ನಾಗರಿಕರ ಸಂಕಲ್ಪವೂ ಆಗಬೇಕು. ಆ ಸಂಕಲ್ಪವನ್ನು ತೊಡಲು ದೀಪಾವಳಿ ನಮಗೆ ಪ್ರೇರಣೆಯಾಗಬೇಕು. ಬೆಳಕಿನ ಬಗ್ಗೆ ರಮ್ಯವಾಗಿ ಮಾತನಾಡುವ ಮನಸ್ಥಿತಿಯಿಂದ ಹೊರಬಂದು, ದೀನದಲಿತರ ಬದುಕಿನ ಹೊಳಪು ಹೆಚ್ಚಿಸುವ ಅರ್ಥಪೂರ್ಣ ಕೆಲಸ ನಡೆಯಬೇಕಾಗಿದೆ.

‘ಇರುವಷ್ಟು ಹೊತ್ತು ನಿನ್ನ ಮುಖ ನಾನು, ನನ್ನ ಮುಖ ನೀನು / ನೋಡಬಹುದೆಂಬ ಒಂದೇ ಒಂದು ಆಸೆಯಿಂದ’ ಹಣತೆ ಹಚ್ಚುತ್ತೇನೆ ನಾನು ಎನ್ನುತ್ತಾರೆ ಕವಿ. ಹೌದು, ನಾವು ಹಚ್ಚುವ ಹಣತೆಯ ಬೆಳಕು ನಮ್ಮ ಎದುರಿನವರನ್ನು ಮಾತ್ರವಲ್ಲ – ನಮ್ಮ ಸುತ್ತಮುತ್ತಲಿನ ಸಮಾಜವನ್ನೂ ನಮಗೆ ತೋರುವಂತಾಗಬೇಕು.

■ ರಘುನಾಥ ಚ.ಹ.